**ಸಾಕ್ಷಿಯನ್ನು ದಿಃ *17/10/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಶ್ರೀ ಟಿಟಿಪಿ ವಕೀಲರಿಂದ ಪ್ರತಿವಾದಿ ಪರವಾಗಿ.***

ನನಗೆ 47 ವಯಸ್ಸು ಇರಬಹುದು. ಸದರಿ ದಾವೆಯ ಕುರಿತು ನನಗೆ ಮಾಹಿತಿ ಇದೆ. ದಾವಾದಾಸ್ತಿ ನನಗೆ ಒಬ್ಬನಿಗೆ ಸೇರಬೇಕು ಎಂದು ದಾವೆ ಹೂಡಿರುತ್ತೇನೆ. ದಾವಾದಾಸ್ತಿ ಒಟ್ಟು 18 ಎಕರೆ ಇದ್ದು, ನನ್ನ ತಂದೆಯ ಪಾಲಿಗೆ ಬರಬೇಕಾದ 9 ಎಕರೆ ಕುರಿತು ನಾನು ದಾವೆ ಹೂಡಿದ್ದೇನೆ. ದಾವಾ ಜಮೀನು ವರನಾಗಲಾವಿ ಗ್ರಾಮದಲ್ಲಿರುತ್ತದೆ. ದಾವಾ ಜಮೀನಿನ ಪೂರ್ವ ದಿಕ್ಕಿಗೆ ನಾಗಪ್ಪ ಎತ್ತಿನಗುಡ್ಡ ಇವರು ಜಮೀನು, ಪಶ್ಚಿಮ ದಿಕ್ಕಿಗೆ ಶೆಟ್ಟಪ ಇವರ ಜಮೀನು, ಉತ್ತರ ದಿಕ್ಕಿಗೆ ಚಂದ್ರಗೌಡ ವಕೀಲರ ಜಮೀನು ಮತ್ತು ದಕ್ಷಿಣ ದಿಕ್ಕಿಗೆ ದ್ಯಾಮಣ್ಣ ತಳವಾರ ಇವರ ಜಮೀನು ಇರುತ್ತದೆ. ವಾದ ಪತ್ರದಲ್ಲಿ ಸದರಿ ಚಕ್ಕುಬಂದಿ ನಮೂದಿಸಿಲ್ಲ ಎಂದರೆ ನಿಜ. ಚಕ್ಕುಬಂದಿಯ ಕುರಿತು ದಾಖಲೆಗಳನ್ನು ಸಹ ಹಾಜರುಪಡಿಸಿಲ್ಲ ಎಂದರೆ ನಿಜ. ಸದರಿ ದಾಖಲೆಗಳನ್ನು ಹಾಜರುಪಡಿಸಲು ನನಗೆ ಅಡಚಣೆವಿರಲಿಲ್ಲ ಎಂದರೆ ನಿಜ.

ದಾವಾ ಜಮೀನು ನನ್ನ ತಂದೆಗೆ ರೈತಾಪಿ ನಾತೇಯಿಂದ ಬಂದಿರುತ್ತದೆ. ಈ ರೀತಿ ನನ್ನ ತಂದೆಯ ಹೆಸರಿನಲ್ಲಿ ಯಾವ ದಿನಾಂಕ ಮತ್ತು ಇಸ್ವಿಯಂದು ಮಂಜೂರು ಆಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ನನ್ನನು ಸೇರಿಸಿ ನಾಲ್ಕು ಜನ ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣು ಮಕ್ಕಳು. ನನ್ನ ತಂದೆಯ ವಂಶಾವಳಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ತಂದೆ ತೀರಿಹೋಗಿ ಅಂದಾಜು 7 ವರ್ಷಗಳಾಗಿವೆ. ನನ್ನ ತಂದೆಯ ಮರಣದ ನಂತರ ಮೃತರ ಜೀವಂತ ಸದಸ್ಯರ ಪ್ರಮಾಣಪತ್ರ ಹಾಜರುಪಡಿಸಿಲ್ಲ, ಮುಂದೆ ಮಾಡಬಹುದು.

ನಾವು ನಮ್ಮ ತಂದೆಯ ಕಾಲದಿಂದ ಅಂದಾಜು 50-60 ವರ್ಷಗಳಿಂದ ಉಳುಮೆ ಮಾಡುತ್ತಿದ್ದೇವೆ. ದಾವಾ ಜಮೀನಿನ ಕಿಮ್ಮತ್ತು ನನಗೆ ಹೇಳಲು ಬರುವುದಿಲ್ಲ. ನಾನೇ ಹಾಜರುಪಡಿಸಿರುವ ದಾವಾ ಜಮೀನಿನ ಉತಾರದಲ್ಲಿ ನನ್ನ ತಂದೆಯ ಅಥವಾ ನನ್ನ ಹೆಸರು ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ತಂದೆಯ ಹೆಸರು ಇರುತ್ತದೆ ಎಂದು ಉತ್ತರಿಸುತ್ತಾರೆ. ಉತಾರದಲ್ಲಿ ನನ್ನ ತಂದೆಯ ಹೆಸರು ಸಾಗುವಳಿದಾರರು ಎಂದು ಮಾತ್ರ ಇರುವ ಕಾರಣ ನಮಗೆ ಯಾವುದೇ ರೀತಿ ಹಕ್ಕು ಇಲ್ಲ ಎಂದರೆ

ಸರಿಯಲ್ಲ. ಉತಾರದಲ್ಲಿ ಕಂಡು ಬರುವ ಬಾಲಚಂದ್ರ, ಚೌಡಪ್ಪ ಮತ್ತು ಮಂಜುನಾಥ ಇವರುಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸಾಕ್ಷಿದಾರರು ಒಟ್ಟು ಜಮೀನು 18 ಎಕರೆ ಇರುವ ಕಾರಣ ಅವರ ಹೆಸರು ಇವೆ ನನ್ನ ತಂದೆಗೆ ಸೇರಿರುವ 9 ಎಕರೆ ಜಮೀನಿಗೆ ಮಾತ್ರ ಹೇಳುತ್ತಿದ್ದೇನೆ ಎಂದು ಉತ್ತರಿಸುತ್ತಾರೆ. ಈ ವಿಷಯ ಸಂಗತಿ ನನ್ನ ವಾದ ಪತ್ರದಲ್ಲಿ ಎಲ್ಲಿಯೂ ಕಾಣಿಸಿಲ್ಲ ಎಂದರೆ ನಿಜ.

ಚೌಡಪ್ಪ ಪ್ರತಿವಾದಿ ನಂ.8 ಇವರ ಪರಿಚಯ ನನಗೆ ಇಲ್ಲ. ನಿ.ಪಿ.1 ರಂತೆ ಕೈಬರಹದ ಉತಾರದ ಪ್ರಕಾರ 2000 ನೇ ಇಸ್ವಿಯಲ್ಲಿ ಚೌಡಪ್ಪ ಇವರು 4 ಎಕರೆ 26 ಗುಂಟೆ ಸಾಗುವಳಿ ಮಾಡುತ್ತಿದ್ದಾರೆ ಎಂದ ಉಲ್ಲೇಖವಿರುವ ನನಗೆ ಗೊತ್ತಿಲ್ಲ. ಮೂಲತಃ 18 ಎಕರೆ ಪ್ರತಿವಾದಿ ನಂ.9 ಫಾರ್ಮಿಂಗ ಕಮೀಟಿ ಇವರ ಜಮೀನು ಇರುತ್ತದೆ ಎಂದರೆ ನಿಜ.

1999 ನೇ ಇಸ್ವಿಯಲ್ಲಿ ನಾನು ಸಾಗು ಮಾಡುತ್ತಿರುವ 9 ಎಕರೆ 12 ಗುಂಟೆ ಜಮೀನಿನಲ್ಲಿ 4 ಎಕರೆ 26 ಗುಂಟೆ ಜಮೀನನ್ನು ಮಾಲೀಕರಾದ ಪ್ರತಿವಾದಿ ನಂ.9 ಇವರು ಚೌಡಪ್ಪ ಇವರಿಗೆ ಸಾಗುವಳಿ ಮಾಡಲು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕದಿಂದ ಚೌಡಪ್ಪ ಇವರೇ ಇಲ್ಲಿಯವರೆಗೂ ಸಾಗು ಮಾಡುತ್ತಾ ಬಂದಿದ್ದಾರೆ ಎಂದರೆ ಅವರು ಬಂದಿದ್ದು ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ನಾನಾಗಲಿ ಅಥವಾ ನನ್ನ ತಂದೆಯಾಗಲಿ ಫಾರ್ಮ ನಂ.7 ಅರ್ಜಿ ಹಾಕಿಲ್ಲ. ಭೂ ನ್ಯಾಯ ಮಂಡಳಿ ಮುಂದೆ ನನ್ನ ತಂದೆ ಫಾರ್ಮ ನಂ.7 ಅರ್ಜಿ ಹಾಕಿದ್ದರು ಸಹ ನಾನು ವಾದ ಪತ್ರದಲ್ಲಿ ಏನೂ ಬರೆದುಕೊಂಡಿಲ್ಲ ಎಂದರೆ ನಿಜ. ಸದರಿ ಜಮೀನು ನಾನು ಯಾವತ್ತು ಸಾಗುವಳಿ ಮಾಡಿಲ್ಲ ಮತ್ತು ಸದರಿ ಜಮೀನಿನ ಕುರಿತು ನನಗೆ ಯಾವುದೇ ವಿಷಯ ಸಂಗತಿ ನನಗೆ ಗೊತ್ತಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ಹೇಳಿರುವ ಪ್ರಕಾರ ದಾವಾ ಜಮೀನು 9 ಎಕರೆ 12 ಗುಂಟೆ ನಮಗೆ ಯಾವುದೇ ಹಕ್ಕು ಇಲ್ಲ ಮತ್ತು ನಾವು ಅದನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ನಂ.8 ಚೌಡಪ್ಪ ಇವರು 4 ಎಕರೆ 26 ಗುಂಟೆ ಹಕ್ಕುದಾರರು ಇರುತ್ತಾರೆ, ಅವರ ಆಸ್ತಿಯನ್ನು ಕಬಳಿಸುವ ದುರುದ್ದೇಶದಿಂದ ನಾನು ಈ ರೀತಿ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯರಿಗೆ ಬೇಟಿನೀಡಿ ನಮ್ಮ ಜಮೀನು ನಮಗೆ ಕೊಡಬೇಕೆಂದು ಯಾವಾಗ ಕೇಳಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ಇದು ಮೊದಲಿನಿಂದಲೂ ಇದ್ದದ್ದು ಇರುತ್ತದೆ, 10-12 ವರ್ಷಗಳಿಂದ ತಕರಾರು ಇರುತ್ತದೆ ಎಂದು ಉತ್ತರಿಸುತ್ತಾರೆ. ಕೊನೆಯ ಬಾರಿಗೆ ಯಾವಾಗ ಕೇಳಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ಮೂರು ವರ್ಷಗಳಿಂದ ಮತ್ತು ಒಂದು ವರ್ಷದೊಳಗಾಗಿ ಈ ರೀತಿ ಕೇಳುತ್ತಾ ಬಂದಿದ್ದೇವೆ ಇದು ಮೊದಲಿನಿಂದಲೂ ಚಾಲ್ತಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಈ ರೀತಿ ಯಾವತ್ತು ಕೇಳಿಲ್ಲ ಮತ್ತು ಸದರಿ ಹೇಳಿಕೆಗಳನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ದಾವಾದಾಸ್ತಿಗೆ ಯಾವುದೇ ಸಂಬಂಧವಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ತಂದೆಯ ಆಸ್ತಿಗೆ ನಾನು ಸಂಬಂಧರುತ್ತೇನೆ ಎಂದು ಉತ್ತರಿಸುತ್ತಾರೆ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಅದೆ,

1 ನೇ ಹೆ ಪಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.